# CENTRAL BOARD OF SECONDARY EDUCATION

# MODEL QUESTION PAPER

# SUBJECT: KANNADA

# SUBJECT CODE - 015

# CLASS - X

# (2022 - 2023)

**TIME: 3 HOURS** **MARKS: 80**

---

**ಸೂಚನೆಗಳು:**

- ಈ ಪ್ರಶ್ನೆ ಪತ್ರಿಕೆಯು A& B ಎಂಬ ಭಾಗಗಳನ್ನು A B C ಮತ್ತು D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.
- A ಭಾಗದಲ್ಲಿ ಒಟ್ಟು 53 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಕೇವಲ 40 ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ- A,ಯ ವಿಭಾಗ A ದಲ್ಲಿ ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ 4 ಗದ್ಯಾಂಶಗಳನ್ನು ಕೊಡಲಾಗಿದೆ. ಅವುಗಳಲ್ಲಿ ಯಾವುದಾದರೂ 2 ಗದ್ಯಾಂಶಗಳನ್ನು ಮಾತ್ರ ಆರಿಸಿಕೊಂಡು 10 ಪ್ರಶ್ನೆಗಳಿಗೆ ಉತ್ತರಿಸಬೇಕು. ಒಂದೊಂದು ಗದ್ಯದಲ್ಲಿ 1 ಅಥವಾ 2 ಹೀಗೆ ಉತ್ತರಗಳನ್ನು ಬರೆಯದೆ ಒಂದು ಪೂರ್ಣ ಗದ್ಯವನ್ನೇ ಆಯ್ಕೆ ಮಾಡಿಕೊಂಡು, ಅದರಲ್ಲಿರುವ 5 ಪ್ರಶ್ನೆಗಳಿಗೆ ಉತ್ತರಿಸಬೇಕು.
- ವಿಭಾಗ - B, ಅನ್ವಯಿಕ ವ್ಯಾಕರಣ ವಿಭಾಗದಲ್ಲಿ ಕೊಟ್ಟಿರುವ 19 ಪ್ರಶ್ನೆಗಳಲ್ಲಿ 16 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.
- ವಿಭಾಗ - C ದಲ್ಲಿಯ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ - B ದ ವಿಭಾಗ - D ದಲ್ಲಿಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

| | | |
|---|---|---|
| **ಭಾಗ- A**<br><br>**(40 ಅಂಕಗಳು)** | **(ವಾಚನ ಮತ್ತು ಗ್ರಹಿಕಾ ಕೌಶಲ್ಯ)** | **10 ಅಂಕಗಳು** |
| | **(ಅನ್ವಯಿಕ ವ್ಯಾಕರಣ)** | **16 ಅಂಕಗಳು** |
| | **(ಬಹು ಆಯ್ಕೆಪ್ರಶ್ನೆ- ಪಠ್ಯಗಳ ಅಧ್ಯಯನ)** | **14 ಅಂಕಗಳು** |
| **ಭಾಗ- B**<br><br>**(40 ಅಂಕಗಳು)** | **ಬರವಣಿಗೆ ಕೌಶಲ್ಯ** | **12 ಅಂಕಗಳು** |
| | **ಪಠ್ಯಗಳ ಅಧ್ಯಯನ** | **28 ಅಂಕಗಳು** |
| | **ಒಟ್ಟು ಅಂಕಗಳು** | **80 ಅಂಕಗಳು** |

**PART – A (40 ಅಂಕಗಳು)**

**SECTION -A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು.**

**I (a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

ಕರ್ನಾಟಕದ ಇತಿಹಾಸದಲ್ಲಿ ರಾಷ್ಟ್ರಕೂಟರ ಕೊಡುಗೆಯು ಅಪಾರವಾದುದು. ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗ ಪಟ್ಟಕ್ಕೆ ಬಂದಾಗ 14 ವರ್ಷದ ಚಿಕ್ಕಬಾಲಕನಾಗಿದ್ದ. ಈ ಸಮಯದಲ್ಲಿ ಚಾಲುಕ್ಯರು ಒಂದುಗೂಡಿ ಅಮೋಘವರ್ಷನನ್ನು ಪಟ್ಟದಿಂದ ತಳ್ಳಿ ರಾಷ್ಟ್ರಕೂಟ ರಾಜ್ಯವನ್ನು ಆಕ್ರಮಿಸಬೇಕೆಂದು ಹೊಂಚು ಹಾಕಿದರು. ಆದರೆ ಬಡೋದಾ ತಾಮ್ರಶಾಸನದಲ್ಲಿ ಹೇಳಿದಂತೆ ಗುಜರಾತಿನ ರಾಜ ಬಂಡುಗಾರರನ್ನು ಗೆದ್ದು ಅಮೋಘವರ್ಷನನ್ನು ಸಿಂಹಾಸನದ ಮೇಲೆ ಸ್ಥಿರಪಡಿಸಿದ. ಸಂಜಾನ ತಾಮ್ರಶಾಸನದಲ್ಲಿ ಪಾತಾಲಮಲ್ಲನೆಂಬ ವೀರಭಟ ಶತ್ರುಗಳನ್ನು ನಿಗ್ರಹಿಸಿ ರಾಜ್ಯದಲ್ಲಿ ಶಾಂತತೆಯನ್ನು ನೆಲೆಗೊಳಿಸಿ ಅಮೋಘವರ್ಷನನ್ನು ತನ್ನ ವಂಶಾನುಗತ ಸಿಂಹಾಸನದ ಮೇಲೆ ಸ್ಥಿರವಾಗಿ ಕೂಡಿಸಿದನೆಂದು ಬರೆದಿದೆ. 2ನೆಯ ಕೃಷ್ಣರಾಜನ ತಾಮ್ರಶಾಸನಗಳಲ್ಲಿ ಅಮೋಘವರ್ಷ ಶತ್ರುಗಳನ್ನು ತಾನೇ ನಿರ್ಮೂಲನ ಮಾಡಿ ರಾಜ್ಯವನ್ನು ಸ್ಥಿರಪಡಿಸಿಕೊಂಡನೆಂದು ಹೇಳಿದೆ.

ಸ್ವತಃ ಕವಿಯೂ ಆಗಿದ್ದ ನೃಪತುಂಗನು ವಿವಿಧ ಮತಗಳ ಕವಿಗಳು, ಪಂಡಿತರಿಗೆ ಆಶ್ರಯದಾತನೂ ಆಗಿದ್ದನು. ಇವನ ಆಶ್ರಯದಲ್ಲಿ ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಗಳು ಪ್ರವರ್ಧಮಾನವಾಗಿದ್ದವು. ಕನ್ನಡದಲ್ಲಿ ಲಭ್ಯವಿರುವ ಪ್ರಾಚೀನ ಗ್ರಂಥ ಕವಿರಾಜಮಾರ್ಗದ ಕರ್ತೃ ನೃಪತುಂಗ ಅಥವಾ ಅವನ ಆಸ್ಥಾನದ ಕವಿಯಾಗಿದ್ದ ಶ್ರೀವಿಜಯ. ಅಮೋಘವರ್ಷನ ಕಾಲದಲ್ಲಿ ಕೆಲವು ಯುದ್ಧಗಳು ಜರುಗಿದರೂ ಅವನ ಸುಮಾರು 62 ವರ್ಷಗಳ ದೀರ್ಘ ಆಳ್ವಿಕೆಯಲ್ಲಿ ಲಲಿತಕಲೆಗಳ ಅಭಿವೃದ್ಧಿಗೆ ಅನುಕೂಲವಾದ ಶಾಂತಿ ಅವನ ರಾಜ್ಯದಲ್ಲಿ ನೆಲೆಸಿತ್ತು. ಈತ ಕನ್ನಡ ಸಾಹಿತ್ಯದ ಉಪಲಬ್ಧ ಗ್ರಂಥಗಳಲ್ಲಿ ಪ್ರಾಚೀನ ಗ್ರಂಥವೆನಿಸಿದ 'ಕವಿರಾಜಮಾರ್ಗ' ಮತ್ತು 'ಪ್ರಶ್ನೋತ್ತರಮಾಲಿಕಾ' ಎಂಬ ಗ್ರಂಥವನ್ನು ರಚಿಸಿದನೆಂದು ಒಂದು ವಾದವಿದೆ.

ಕವಿರಾಜಮಾರ್ಗ ಭಾಮಹ ಮತ್ತು ದಂಡಿಯರ ಅಲಂಕಾರ ಗ್ರಂಥಗಳನ್ನು ಬಹಳ ಮಟ್ಟಿಗೆ ಅನುಸರಿಸಿದೆ. ಕನ್ನಡ ಅಲಂಕಾರ ಗ್ರಂಥಗಳಲ್ಲಿ ಇದು ಪ್ರಮಾಣಭೂತವಾದುದು. ಅಮೋಘವರ್ಷನು ಶ್ರೀವಿಜಯ ಮೊದಲಾದ ವಿದ್ವಾಂಸರಿಗೆ ತನ್ನ ಆಸ್ಥಾನದಲ್ಲಿ ಆಶ್ರಯವಿತ್ತಿದ್ದ. ಜಿನಸೇನಾಚಾರ್ಯರು ಈತನ ಗುರು. ಶಾಕಟಾಯಕನೆಂಬ ಜೈನ ವೈಯಾಕರಣ ಶಬ್ದಾನುಶಾಸನವನ್ನೂ ಅದಕ್ಕೆ ಟೀಕಾರೂಪವಾದ ಅಮೋಘವೃತ್ತಿಯನ್ನೂ ಆಗಲೇ ರಚಿಸಿದ್ದನು. ಕನ್ನಡನಾಡಿನ ಜನರು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಅಂದರೆ "ಓದದೆಯೇ ಕಾವ್ಯ ಪ್ರಯೋಗದಲ್ಲಿ ನಿಪುಣರು" ಎಂದು ನೃಪತುಂಗನ ಆಸ್ಥಾನ ಕವಿ ಶ್ರೀವಿಜಯನು ಹೊಗಳಿದ್ದಾನೆ. ಅಮೋಘವರ್ಷ ಲಲಿತಕಲೆಗಳಿಗೆ ಪ್ರೋತ್ಸಾಹವನ್ನು ನೀಡಿದ್ದನು ಎಂಬುದನ್ನು ಇತಿಹಾಸದ ಮೂಲಕ ತಿಳಿಯಬಹುದು.

**ಪ್ರಶ್ನೆಗಳು:**

**1.** ಗುಜರಾತಿನ ರಾಜ ಬಂಡುಗಾರರನ್ನು ಗೆದ್ದು ಅಮೋಘವರ್ಷನನ್ನು ಸಿಂಹಾಸನದ ಮೇಲೆ ಸ್ಥಿರಪಡಿಸಿದ-ಎಂಬ ಹೇಳಿಕೆ ಇರುವುದು ಈ ಶಾಸನದಲ್ಲಿ

a. ಬಡೋದಾ ತಾಮ್ರಶಾಸನ
b. ಸಂಜಾನ ತಾಮ್ರಶಾಸನ
c. ಕೃಷ್ಣರಾಜನ ತಾಮ್ರಶಾಸನ
d. ಹಲ್ಮಿಡಿ ಶಾಸನ

**2.** ಕನ್ನಡದಲ್ಲಿ ಲಭ್ಯವಿರುವ ಪ್ರಾಚೀನ ಗ್ರಂಥ ______

a. ಪಂಪಭಾರತ
b. ಶಬ್ದಾನುಶಾಸನ
c. ಕವಿರಾಜಮಾರ್ಗ
d. ಶಬ್ದಮಣಿದರ್ಪಣ

**3**. ಅಮೋಘವರ್ಷ ನೃಪತುಂಗನ ಗುರು _______

a. ಅಜಿತಸೇನಾಚಾರ್ಯರು
b. ವೀರಾಚಾರ್ಯರು
c. ಶಾಕಟಾಯಕ
d. ಜಿನಸೇನಾಚಾರ್ಯರು

**4.** 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಅಂದರೆ ''ಓದದೆಯೇ ಕಾವ್ಯ ಪ್ರಯೋಗದಲ್ಲಿ ನಿಪುಣರು'' ಈ ಸಾಲುಗಳನ್ನು ಬರೆದವನು ಶ್ರೀವಿಜಯ

a. ಮೇಲಿನ ಹೇಳಿಕೆಯು ಸರಿಯಾಗಿದೆ.
b. ಮೇಲಿನ ಹೇಳಿಕೆಯು ತಪ್ಪಾಗಿದೆ.
c. ಮೇಲಿನ ಕಾವ್ಯದ ಸಾಲುಗಳನ್ನು ಬರೆದವರು ಪಂಪ.
d. ಮೇಲಿನ ಕಾವ್ಯದ ಸಾಲುಗಳನ್ನು ಬರೆದವರು ರನ್ನ.

**5.** ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿ ಈ ಸಾಹಿತ್ಯದ ಪ್ರಕಾರಗಳು ಪ್ರವರ್ಧಮಾನವಾಗಿದ್ದವು.

a. ಕನ್ನಡ ಹಾಗೂ ಪಾಳೀ ಸಾಹಿತ್ಯ.
b. ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯ.
c. ಕನ್ನಡ ಹಾಗೂ ಪ್ರಾಕೃತ ಸಾಹಿತ್ಯ.
d. ಕನ್ನಡ ಹಾಗೂ ತಮಿಳು ಸಾಹಿತ್ಯ.

**ಅಥವಾ**

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

ನೀವು ನಿಮ್ಮ ಸುತ್ತಮುತ್ತಲಿನ ಜೀವನವನ್ನು ಗಮನಿಸಿರಬಹುದು. ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಬಡತನ ಕಂಡುಬರುತ್ತದೆ. ನಗರಗಳಲ್ಲಿ ಬೀದಿಬದಿಯ ವ್ಯಾಪಾರಿಗಳು, ದಿನಗೂಲಿ ಕಾರ್ಮಿಕರು, ಭಿಕ್ಷುಕರು, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಅಲೆಮಾರಿಗಳು ಮುಂತಾದವರು ಬಡವರೆನಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸ್ವಂತ ಜಮೀನು ಇಲ್ಲದೆ ಇತರರ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರು, ಕಡಿಮೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿಯೇತರ ಕಸಬುಗಳಲ್ಲಿ ತೊಡಗಿರುವ ಬುಟ್ಟಿ ಹೆಣೆಯುವವರು, ಮಡಿಕೆ ಮಾಡುವವರು, ಕಮ್ಮಾರರು, ಮುಂತಾದವರು ಬಡತನದಲ್ಲಿ ಬದುಕುತ್ತಿದ್ದಾರೆ. ಬಡವರು ಎರಡು ಹೊತ್ತಿನ ಊಟಕ್ಕೆ ಸಾಕಾಗುವಷ್ಟು ಆದಾಯ ಗಳಿಸಲು ವಿಫಲರಾಗುತ್ತಾರೆ. ಇದರಿಂದಾಗಿ ಇವರಲ್ಲಿ ಅಪೌಷ್ಠಿಕತೆ ಮತ್ತು ಅನಾರೋಗ್ಯ ಅಧಿಕವಾಗಿರುತ್ತದೆ. ಶಿಕ್ಷಣ ಮತ್ತು ತರಬೇತಿಯಿಲ್ಲದೆ ಕೌಶಲ್ಯರಹಿತರಾಗಿರುತ್ತಾರೆ. ಇವರಿಗೆ ಉದ್ಯೋಗಾವಕಾಶಗಳು ಕಡಿಮೆ ಮತ್ತು ಇರುವ ಕೆಲಸವೂ ಸ್ಥಿರವಾಗಿರುವುದಿಲ್ಲ. ಸಾಮಾನ್ಯವಾಗಿ ಬಡವರು ಕಚ್ಚಾ ಮನೆಗಳಲ್ಲಿ ವಾಸಿಸುತ್ತಾರೆ ಅಥವಾ ಮನೆಯೇ ಇರುವುದಿಲ್ಲ. ಹೀಗೆ ಮಾನವನ ಬದುಕಿಗೆ ಅಗತ್ಯವಾದ ಊಟ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಕನಿಷ್ಠ ಮೂಲಭೂತ ಅವಶ್ಯಕತೆಗಳಿಂದ ಬಹುಪಾಲು ಜನರು ವಂಚಿತರಾಗಿರುವ ಸ್ಥಿತಿಯನ್ನು ಬಡತನ ಎನ್ನಬಹುದು.

ಆದರೆ ಬಡತನವನ್ನು ಗುರುತಿಸಿ ಅದರ ಪ್ರಮಾಣವನ್ನು ಅಳೆಯುವುದಕ್ಕಾಗಿ ನಿಖರವಾದ ಮಾನದಂಡದ ಅವಶ್ಯಕತೆಯಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದಾದಾಭಾಯಿ ನವರೋಜಿಯವರು ಬಡವರನ್ನು ಗುರುತಿಸಲು ಮೊಟ್ಟಮೊದಲ ಬಾರಿಗೆ ಬಡತನ ರೇಖೆಯನ್ನು ಬಳಕೆಗೆ ತಂದರು. ಸ್ವಾತಂತ್ರ್ಯ ನಂತರವೂ ಬಡತನ ರೇಖೆಯನ್ನು ಬಡತನ ಅಳೆಯುವ ಪ್ರಮುಖ ಸೂಚಿಯಾಗಿ ಬಳಕೆಯಾಗುತ್ತಿದೆ. ಹಾಗಾದರೆ ಬಡತನ ರೇಖೆ ಎಂದರೇನು? ಮೂಲ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಅವಶ್ಯವಿರುವ ಕನಿಷ್ಠ ಆದಾಯದ ಪ್ರಮಾಣವೇ ಬಡತನ ರೇಖೆಯಾಗಿದೆ. ಅದು ಒಬ್ಬ ವ್ಯಕ್ತಿಯು ತನ್ನ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಂಡು, ಆರೋಗ್ಯಯುತವಾಗಿ ಮತ್ತು ಘನತೆಯುತವಾಗಿ ಜೀವನ ನಡೆಸಲು ವೆಚ್ಚ ಮಾಡುವ ಸಾಮರ್ಥ್ಯವನ್ನು ಸೂಚಿಸುತ್ತದೆ 2005ರಲ್ಲಿ ಪ್ರೊ. ಸುರೇಶ ತೆಂಡೂಲ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸಿ ಆಹಾರದ ಜೊತೆಗೆ ಶಿಕ್ಷಣ, ಆರೋಗ್ಯ, ವಿದ್ಯುತ್‌ಶಕ್ತಿ ಮತ್ತು ಸಾರಿಗೆಗಳ ಮೇಲೆ ಮಾಡುವ ತಲಾ ಮಾಸಿಕ ಅನುಭೋಗಿ ವೆಚ್ಚವನ್ನು ಅಂದಾಜಿಸಿ ಬಡತನ ರೇಖೆಯನ್ನು ರೂಪಿಸಲಾಗಿದೆ.

ಪ್ರಶ್ನೆಗಳು:

1. ಬಡವರಲ್ಲಿ ಅಧಿಕವಾಗಿ ಕಂಡುಬರುವುದು ______

   a. ಹಣ ಮತ್ತು ಉದ್ಯೋಗ

   b. ಅಪೌಷ್ಠಿಕತೆ ಮತ್ತು ಅನಾರೋಗ್ಯ

c. ಬಟ್ಟೆ ಮತ್ತು ಆಹಾರ

d. ಮನೆ ಮತ್ತು ಉದ್ಯೋಗ

2. ಸಾಮಾನ್ಯವಾಗಿ ಬಡವರು _____ ಮನೆಗಳಲ್ಲಿ ವಾಸಿಸುತ್ತಾರೆ.

a. ಕಚ್ಚಾ

b. ಬಂಗಲೆ

c. ಅಪಾರ್ಟ್ ಮೆಂಟ್ ಗಳಲ್ಲಿ

d. ಕಾಂಕ್ರೀಟ್

3. ಮೊಟ್ಟಮೊದಲ ಬಾರಿಗೆ ಬಡತನ ರೇಖೆಯನ್ನು ಬಳಕೆಗೆ ತಂದವರು ______

a. ಗಾಂಧೀಜಿ

b. ದಾದಾಬಾಯಿ ನವರೋಜಿ

c. ಸರ್ದಾರ್ ವಲ್ಲಭಬಾಯಿ ಪಟೇಲ್

d. ಜವಹರಲಾಲ್ ನೆಹರು

4. ಪ್ರೊ. ಸುರೇಶ ತೆಂಡೂಲ್ಕರ್ ಸಮಿತಿಯು ಬಡತನ ರೇಖೆಯನ್ನು ರೂಪಿಸಿದ ವರ್ಷ______

a. 2006

b. 2007

c. 2005

d. 2008

5. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಉತ್ತರಿಸಿ.

**ಹೇಳಿಕೆ-1.** ನಗರಗಳಲ್ಲಿ ಬೀದಿಬದಿಯ ವ್ಯಾಪಾರಿಗಳು, ದಿನಗೂಲಿ ಕಾರ್ಮಿಕರು, ಭಿಕ್ಷುಕರು, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಅಲೆಮಾರಿಗಳು ಬಡವರೆನಿಸಿದ್ದಾರೆ.

**ಹೇಳಿಕೆ - 2** ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿಯೇತರ ಕಸಬುಗಳಲ್ಲಿ ತೊಡಗಿರುವ ಬುಟ್ಟಿ ಹೆಣೆಯುವವರು, ಮಡಿಕೆ ಮಾಡುವವರು, ಕಮ್ಮಾರರು ಬಡವರೆನಿಸಿದ್ದಾರೆ.

a. ಮೇಲಿನ ಎರಡು ಹೇಳಿಕೆಗಳೂ ತಪ್ಪು

b. ಮೊದಲನೆಯ ಹೇಳಿಕೆ ಮಾತ್ರ ಸರಿ

c. ಎರಡನೆಯ ಹೇಳಿಕೆ ಮಾತ್ರ ಸರಿ

d. ಮೇಲಿನ ಎರಡು ಹೇಳಿಕೆಗಳು ಸರಿ

**II. (a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ 1509 ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಕನಕದಾಸರು ಬರಿ ಕುರುಬ ಜಾತಿಗೆ ಸೀಮಿತವಾದ ಭಕ್ತರಲ್ಲ ಎಲ್ಲಾ ಜಾತಿಗಳಿಗೆ ಬೇಕಾದವರು. 15 - 16 ನೆಯ ಶತಮಾನದಲ್ಲೇ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಕನಕದಾಸರು ಎಂದರೆ ತಪ್ಪಾಗಲಾರದು. ಕನಕದಾಸರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರ ಕೀರ್ತನೆಗಳ ಅಂಕಿತ ಕಾಗಿನೆಲೆಯ ಆದಿಕೇಶವರಾಯ ಎಂಬುದು. ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದಾಗಿದೆ. ಕನಕದಾಸರು ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ, ನೃಸಿಂಹಸ್ತವ (ಉಪಲಬ್ದವಿಲ್ಲ) ಕೃತಿಗಳನ್ನು ಬರೆದಿದ್ದಾರೆ. ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ ಧಣಿಯಾಗಿ, ಇನಿಯನಾಗಿ, ಅಣೋರಣೀಯನಾಗಿ, ಮಹತೋಮಹೀಮನಾಗಿ ಅವರು ಕಂಡಿದ್ದಾರೆ. 'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ 'ಎಂದು ಕರೆದು ನೆಲೆ ನಿಲ್ಲಿಸಿಕೊಂಡ ಅನುಭಾವ ಅವರದು. ಒಳಗಣ್ಣಿನಿಂದ ಅವನ ಕಂಡು- 'ಕಂಡೆ ನಾ ತಂಡ ತಂಡ ಹಿಂಡು ದೈವ ಪ್ರಚಂಡ ರಿಪು ಗಂಡ ಉದ್ಧಂಡ ನರಸಿಂಹನ' ಎಂದು ಸಂತೋಷಪಟ್ಟಿದ್ದಾರೆ.

**ಪ್ರಶ್ನೆಗಳು**

**1. ಕನಕದಾಸರ ತಾಯಿತಂದೆಯರು ____**

a. ಬಚ್ಚಮ್ಮ -ಬೀರಪ್ಪನಾಯಕ

b. ಮಾದರಸ -ಮಾದಲಾಂಬಿಕೆ

c. ವರದಪ್ಪನಾಯಕ- ರುಕ್ಮಿಣಿ

d. ಶ್ರೀನಿವಾಸಪ್ಪ - ಕೂಸಮ್ಮ

**2. ಕನಕದಾಸರ ಅಂಕಿತನಾಮ ______**

a. ಗುಹೇಶ್ವರಾ

b. ಕೂಡಲಸಂಗಮದೇವ

c. ಪುರಂದರವಿಠಲ

d. ಕಾಗಿನೆಲೆಯ ಆದಿಕೇಶವರಾಯ

**3.** ಕನಕದಾಸರು ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು _____ ರೂಪದಲ್ಲಿ ನೀಡಿದ್ದಾರೆ.

a. ತ್ರಿಪದಿಗಳ

b. ವಚನಗಳ

c. ಕಂದಗಳ

**d.** ಮುಂಡಿಗೆಗಳ

**4.** ಕನಕದಾಸರು ಬರೆದ ಕೃತಿಗಳು_____

a. ರಾಮಧಾನ್ಯ ಚರಿತೆ, ಹರಿಭಕ್ತಿಸಾರ, ಶ್ರೀರಾಮಾಯಣದರ್ಶನಂ, ಪಂಪಭಾರತ

b. ಮೋಹನತರಂಗಿಣಿ, ನಳಚರಿತ್ರೆ, ಪಂಪಭಾರತ, ಶ್ರೀರಾಮಾಯಣದರ್ಶನಂ

c. ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ

d. ರಾಮಧಾನ್ಯ ಚರಿತೆ, ಗದಾಯುದ್ಧ, ಮೋಹನತರಂಗಿಣಿ, ಪಂಪಭಾರತ,

**5. 'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ 'ಎಂದು ಕನಕದಾಸರು____ ಯನ್ನು ಕರೆದರು.**

a. ಹರ

b. ಬ್ರಹ್ಮ

c. ಇಂದ್ರ

d. ಹರಿ

**ಅಥವಾ**

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

ಪ್ರಾಚೀನ ಕಾಲದ ಕೊನೆಯ ಘಟ್ಟ ಮತ್ತು ಆರಂಭಿಕ ಮಧ್ಯಕಾಲದವರೆಗೂ ಇದ್ದ ರಜಪೂತ ಮನೆತನಗಳ ಅರಸರು ತಮ್ಮ ಆಳ್ವಿಕೆಯಲ್ಲಿ ಧರ್ಮ, ಕಲೆ, ಸಂಸ್ಕೃತಿಗಳಿಗೆ ಉದಾರವಾಗಿ ಪ್ರೋತ್ಸಾಹ ನೀಡಿದ್ದಾರೆ. ರಜಪೂತ ಅರಸರು ಸ್ವತಃ ವಿದ್ವಾಂಸರು ಆಗಿದ್ದರು. ಭೋಜ, ಮುಂಜ, ಮೊದಲಾದ ಅರಸರೇ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು. ಭೋಜ ರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಘನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದಿದ್ದರು. ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು. ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ

ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರ ರಾಮ ಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರ ಪಾಲ ಚರಿತ' ಮಹತ್ವದ್ದಾಗಿವೆ. ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರ್ದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ಎಂಬುವರು ರಚಿಸಿದರು. ಈ ಕಾಲದಲ್ಲಿ ಗುಜರಾತಿ, ರಾಜಸ್ತಾನಿ, ಹಿಂದಿ ಭಾಷೆಗಳು ಅಭಿವೃದ್ಧಿಯಾದವು. ರಜಪೂತರು ವಿದ್ಯಾಕೇಂದ್ರಗಳಾದ ನಳಂದಾ, ಕಾಶಿ, ವಿಕ್ರಮಶಿಲ, ಉಜ್ಜಯಿನಿಗಳಿಗೆ ಪ್ರೋತ್ಸಾಹ ನೀಡಿದರು.

**ಪ್ರಶ್ನೆಗಳು:**

**1.** ಪ್ರಾಚೀನ ಕಾಲದ ಕೊನೆಯ ಘಟ್ಟ ಮತ್ತು ಆರಂಭಿಕ ಮಧ್ಯಕಾಲದವರೆಗೂ ಇದ್ದ ರಾಜ ಮನೆತನ _____

a. ಗಂಗರು

b. ಮೌರ್ಯರು

c. ಶಾತವಾಹನರು

d. ರಜಪೂತರು

**2**. ಭಾರವಿಯು ಬರೆದ ಕೃತಿ ----------------

a. ಕಿರಾತಾರ್ಜುನೀಯ

b. ಗೀತಗೋವಿಂದ

c. ರಾವಣ ವಧಾ

d. ಕಾವ್ಯ ಮೀಮಾಂಸೆ

**3.** ನಳಂದಾ, ಕಾಶಿ, ವಿಕ್ರಮಶಿಲ, ಉಜ್ಜಯಿನಿಗಳು ರಜಪೂತರ ಕಾಲದ_____

a. ವಿದ್ಯಾಕೇಂದ್ರಗಳು

b. ವ್ಯಾಪಾರ ಕೇಂದ್ರಗಳು

c. ಮಾರುಕಟ್ಟೆಗಳು

d. ತೀರ್ಥಕ್ಷೇತ್ರಗಳು

**4.** ಶಾಂತಿಸೇನ, ಪ್ರಭಾಚಂದ್ರ ಸೂರಿ, ಧನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದದ್ದು ____ಕಾಲದಲ್ಲಿ

a. ಕಾಳಿದಾಸನ

b. ದುಷ್ಯಂತನ

c. ಪ್ರತಾಪ ಸಿಂಹನ

d. ಭೋಜರಾಜನ

**5**. ರಜಪೂತರ ಕಾಲದಲ್ಲಿ ಅಭಿವೃದ್ಧಿಯಾದ ಭಾಷೆಗಳು _____

a. ಕನ್ನಡ, ಹಿಂದಿ, ತೆಲುಗು

b. ಸಂಸ್ಕೃತ , ಅರಬ್ಬೀ, ಮರಾಠಿ

c. ಗುಜರಾತಿ, ರಾಜಸ್ತಾನಿ, ಹಿಂದಿ

d. ಮಲಯಾಳಂ, ಹಿಂದಿ, ತಮಿಳು

**SECTION -B**

**(ಅನ್ವಯಿಕ ವ್ಯಾಕರಣ) = 16 ಅಂಕಗಳು.**

**III. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

**1.** ಕೆಳಗೆ ಕೊಟ್ಟಿರುವ ಸಂಧಿ – ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ಗಿರೀಶ | 1. ಲೋಪಸಂಧಿ |
| b. ದಿಗಂತ | 2. ಗುಣಸಂಧಿ |
| c. ದೇವೇಂದ್ರ | 3. ಸವರ್ಣದೀರ್ಘ ಸಂಧಿ |
| d. ಊರೂರು | 4. ಜಶ್ತ್ವಸಂಧಿ |
| | 5. ಆಗಮಸಂಧಿ |

a. a-3 b-4 c-2 d-1

b. a-5 b-1 c- 2 d-3

c. a-3 b- 4 c-5 d-2

d. a-2 b-4 c-3 d-1

**2.** ‘ ಬೇಹಾರಿ’ -ಈ ಪದದ ತತ್ಸಮ ರೂಪ _____

a. ವಂಧ್ಯಾ

b. ಬಜೆ

c. ವ್ಯಾಪಾರಿ

d. ಬಂಜರೆ

**3. 'ಸಾವಿತ್ರಿಯುಮ್' ಎಂಬ ಪದವು ಪ್ರಥಮ ವಿಭಕ್ತಿಯಾದರೆ 'ಸಂಶಯದೊಳ್' ಎಂಬ ಪದವು** ಈ ವಿಭಕ್ತಿಯಾಗಿದೆ.

a. ದ್ವಿತೀಯಾ

b. ಸಪ್ತಮೀ

c. ಪ್ರಥಮಾ

d. ಚತುರ್ಥೀ

**4.**''ಸಂದೇಹ' - ಈ ಪದದ ವಿರುದ್ಧಾರ್ಥಕ ಪದ________

a. ನಿಸ್ಸಂದೇಹ

b. ಕುಸ್ಸಂದೇಹ

c. ದುರದೃಷ್ಟ

d. ಅಪಸಂದೇಹ

5. **'ಭೀಮನು ಬಕಾಸುರನನ್ನು ಕೊಂದನು.'** - ಈ ವಾಕ್ಯದಲ್ಲಿ 'ಕೊಂದನು' ಎಂಬುದು _____ ಪದವಾಗಿದೆ.

a. ಕರ್ತೃಪದ

b. ಕರ್ಮಪದ

c. ಕ್ರಿಯಾಪದ

d. ನಾಮಪದ

**IV. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

**1.' ಘ್ರಾಣೇಂದ್ರಿಯ'** - ಈ ಪದದ ಸಮಾನಾರ್ಥಕಪದ ______

a. ಕಿವಿ

b. ಬಾಯಿ

c. ಮೂಗು

d. ಕಣ್ಣು

2. 'ಅವನು ಕಷ್ಟಪಟ್ಟು ಚೆನ್ನಾಗಿ ಓದುವನು'.ಈ ವಾಕ್ಯದಲ್ಲಿರುವ ಸರ್ವನಾಮ_____

a. ಅವನು

b. ಕಷ್ಟಪಟ್ಟು

c. ಚೆನ್ನಾಗಿ

d. ಓದುವನು

3. 'ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ.' ಈ ವಾಕ್ಯದಲ್ಲಿರುವ ಕ್ರಿಯಾಪದದ ಧಾತು ರೂಪ _____

a. ಅಡಿಗಲ್ಲು

b. ಇತಿಹಾಸ

c. ದೊರೆ

d. ಹೆಜ್ಜೆಹೆಜ್ಜೆಗೆ

4. ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಸಮಾಸ ಪದವನ್ನು ಗುರುತಿಸಿ.

a. ಬೆಟ್ಟದಾವರೆ,

b. ತಲೆನೋವು,

c. ಕೆಂದಾವರೆ

d. ಅರಮನೆ

5. 'ಕಾಡು' ಈ ಪದದ ನಾನಾರ್ಥಗಳನ್ನು ಹೀಗೆ ಗುರುತಿಸಬಹುದು.

a. ಅರಣ್ಯ, ಪೀಡಿಸು

b. ಕಷ್ಟ, ಸುಖ

c. ಬದುಕು, ಬವಣೆ

d. ತೊಂದರೆ, ಸಂತೋಷ

**V. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

**1**. '**ಬರೆದಾನು**' ಈ ಪದವು _____ಪದಕ್ಕೆ ಉದಾಹರಣೆಯಾಗಿದೆ.

a. ಸಂಭಾವನಾರ್ಥಕ

b. ಭಾವಾತ್ಮಕ

c. ನಿಷೇಧಾರ್ಥಕ

d. ಸರ್ವನಾಮ

2. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು'. ಈ ವಾಕ್ಯವು ವರ್ತಮಾನ ಕಾಲದಲ್ಲಿ ಹೀಗೆ ಆಗುತ್ತದೆ.

a. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆಯಲಿ'

b. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆಯುವನು'

c. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆಯುತ್ತಾನೆ'

d. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆಯನು'

3. ‘ ಕವಿಯು ಕಾವ್ಯವನ್ನು ಬರೆದನು.    ಇದರ ಕರ್ಮಣಿ ಪ್ರಯೋಗ _____

a. ಕಾವ್ಯವನ್ನು ಕವಿ ಬರೆದನು.
b. ಬರೆದನು ಕವಿಯು ಕಾವ್ಯವನ್ನು.
c. ಕವಿಯು ಕಾವ್ಯ ಬರೆದಾನು
d. ಕಾವ್ಯವು ಕವಿಯಿಂದ ಬರೆಯಲ್ಪಟ್ಟಿತು.

4. ‘ಬಾನು- ಭಾನು’ **ಈ** ಪದಗಳ ಅರ್ಥ ವ್ಯತ್ಯಾಸವು ಕ್ರಮವಾಗಿ ಹೀಗಿದೆ.

a. ಮುಖ್ಯ - ಅಮುಖ್ಯ
b. ನಡುವೆ - ಕೊನೆಗೆ
c. ಪ್ರಾರಂಭ - ಅಂತ್ಯ
d. ಆಕಾಶ - ಸೂರ್ಯ

**5.** ಈ ಗಾದೆಯನ್ನು ಪೂರ್ಣಗೊಳಿಸಿ. ‘ಊಟಬಲ್ಲವನಿಗೆ ರೋಗವಿಲ್ಲ______

a. ಯುಕ್ತಿ ಮೇಲು
b. ಮಾತು ಬಲ್ಲವನಿಗೆ ಜಗಳವಿಲ್ಲ
c. ಶಕ್ತಿ ಬೇಕು
d. ಮಾತೇ ಮೃತ್ಯು

**VI. ಕೆಳಗಿನ ವ್ಯಾಕರಣಾಂಶಗಳ ಬಹುಆಯ್ಕೆಯ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ** **1X4=4**

**1. ‘ಹೀಂಗ’ ಈ ಪದದ ಗ್ರಾಂಥಿಕ ರೂಪ_____**

a. ಹಾಗೆ
b. ಹೇಗೆ
c. ಹೀಗೆ
d. ಹೋಗೆ

**2. ‘ಮನೆ’ ಈ ಪದದ ಜೋಡಿಪದ _____ ಆಗುತ್ತದೆ.**

a. ಮಠಿ
b. ಮಠ
c. ಗಿಕ್ಕಳು
d. ಪಕ್ಕಳು

**3. ಈ ಕೆಳಗಿನವುಗಳಲ್ಲಿ ದ್ವಿರುಕ್ತಿ ಪದ _____**

a. ಪಟಪಟನೆ

b. ಮೆಲ್ಲಮೆಲ್ಲನೆ

c. ಸತಿಪತಿ

d. ಹಣಗಿಣ

**4. "ಟಕ್, ಟಕ್, ಟಕ್" ಪುನಃ ಶಬ್ದ ಜೊತೆಯಲ್ಲೇ, "ಯಾರದು, ಒಳಗೆ? ಬಾಗಿಲು ತೆಗೆಯಿರಿ" ಎಂಬ ಅಧಿಕಾರವಾಣಿ. ' - ಈ ವಾಕ್ಯದಲ್ಲಿರುವ 'ಟಕ್, ಟಕ್, ಟಕ್' ಎಂಬ ಪದವು ---------**

a. ಅನುಕರಣಾವ್ಯಯ

b. ದ್ವಿರುಕ್ತಿ

c. ಜೋಡುನುಡಿ

d. ಸರ್ವನಾಮ

**SECTION -C**

**(ಬಹು ಆಯ್ಕೆ ಪ್ರಶ್ನೆ- ಪಠ್ಯಗಳ ಅಧ್ಯಯನ) =14 ಅಂಕಗಳು.**

**VII. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ಬರೆದಿರುವ 'ಹಸುರು' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1X5=5**

**ಹಸುರು**

ನವರಾತ್ರಿಯ ನವಧಾತ್ರಿಯ

ಈ ಶ್ಯಾಮಲ ವನಧಿಯಲಿ

ಹಸುರಾದುದೊ ಕವಿಯಾತ್ಮಂ

ರಸಪಾನ ಸ್ನಾನದಲಿ!

ಹಸುರಾಗಸ; ಹಸುರು ಮುಗಿಲು;

ಹಸುರು ಗದ್ದೆಯಾ ಬಯಲು;

ಹಸುರಿನ ಮಲೆ; ಹಸುರು ಕಣಿವೆ;

ಹಸುರು ಸಂಜೆಯೀ ಬಿಸಿಲೂ!

ಅಶ್ವೀಜದ ಶಾಲಿವನದ

ಗಿಳಿಯೆದೆ ಬಣ್ಣದ ನೋಟ;

ಅದರೆಡೆಯಲಿ ಬನದಂಚಲಿ

ಕೊನೆವೆತ್ತಡಕೆಯ ತೋಟ!

ಅದೊ ಹುಲ್ಲಿನ ಮಕಮಲ್ಲಿನ

ಪೊಸಪಚ್ಚೆಯ ಜಮಖಾನೆ

ಪಸರಿಸಿ ತಿರೆ ಮೈ ಮುಚ್ಚಿರೆ

ಬೇರೆ ಬಣ್ಣವನೆ ಕಾಣೆ!

ಹೊಸ ಹೂವಿನ ಕಂಪು ಹಸುರು,

ಎಲರಿನ ತಂಪೂ ಹಸುರು!

ಹಕ್ಕಿಯ ಕೊರಲಿಂಪು ಹಸುರು!

ಹಸುರು ಹಸುರಿಳೆಯುಸಿರೂ!

ಹಸುರತ್ತಲ್! ಹಸುರಿತ್ತಲ್!

ಹಸುರೆತ್ತಲ್ ಕಡಲಿನಲಿ

ಹಸುರ್ಗಟ್ಟಿತೊ ಕವಿಯಾತ್ಮಂ

ಹಸುರ್‌ನೆತ್ತರ್ ಒಡಲಿನಲಿ!

**ಪ್ರಶ್ನೆಗಳು:**

**1.** ಆಶ್ವಯುಜದ ಬತ್ತದ ಗದ್ದೆಯ ಬಣ್ಣ ______

a. ಗಿಳಿ ಹಸಿರು

b. ಸೀರೆಯ ಹಸಿರು

c. ಎಲೆಯ ಹಸಿರು

d. ಗೋಡೆ ಹಸಿರು

**2.** ಕವಿಯು ನೋಡಿದ ಅಡಕೆಯ ತೋಟ ಇರುವುದು

a. ಸಮುದ್ರದ ಪಕ್ಕ

b. ಬನದಂಚಲಿ

c. ಸರೋವರದ ಪಕ್ಕ

d. ಮನೆಯ ಹಿತ್ತಿಲಲ್ಲಿ

**3.** ಹೊಸ ಹೂವಿನ ಕಂಪು ಹಸುರು - ಈ ಸಾಲು ಈ ಇಂದ್ರಿಯವನ್ನು ಸೂಚಿಸುತ್ತದೆ.

a. ಕಿವಿ

b. ಮೂಗು

c. ಕಣ್ಣು

d. ಚರ್ಮ

**4. ಕವಿಯಾತ್ಮವು ಹಸುರ್ಗಟ್ಟಿದ್ದು ಇಲ್ಲಿ**

a. ಮನೆಯಲ್ಲಿ

b. ನಗರದಲ್ಲಿ

c. ಹಸುರ್ ನೆತ್ತರ್ ಒಡಲಿನಲಿ

d. ಊರಿನಲ್ಲಿ

5. ಹಸಿರಿನ ಹುಲ್ಲನ್ನು ಕವಿ ಇದಕ್ಕೆ ಹೋಲಿಸಿದ್ದಾರೆ.

a. ಕೆಂಪನೆ ಬಟ್ಟೆಗೆ

b. ಜಮಖಾನೆಗೆ

c. ರೇಷ್ಮೆಬಟ್ಟೆಗೆ

d. ಹಸಿರು ಸೀರೆಗೆ

**VIII. ಈ ಕೆಳಗೆ ಕೊಟ್ಟಿರುವ ಡಿ.ಎನ್. ಜಯಪ್ಪಗೌಡ ಅವರು ರಚಿಸಿರುವ ಭಾಗ್ಯಶಿಲ್ಪಿಗಳು ಎಂಬ ಪಾಠದ ಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1X5=5**

ವಿಶ್ವೇಶ್ವರಯ್ಯ ಅವರು ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದರು. ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ಯೋಜನೆ ಪ್ರಾರಂಭ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ, ಮಾರಿಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ, ಇವೆಲ್ಲ ಅವರ ಅಭಿವೃದ್ಧಿ ಕಾರ್ಯಗಳ ಕುರುಹು. ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ನೇತಾರರಾಗಿ 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆಮಾತಿನಂತೆ ಬೆಳೆದ ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ದೇಶದ ಹಲವಾರು ಪ್ರತಿಷ್ಠಿತ

ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳು ಸದಸ್ಯತ್ವ ಹಾಗೂ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದವು. ಮಹಾನ್ ಆಡಳಿತಗಾರರಾದ ಇವರ ಶತಮಾನೋತ್ಸವದ ಸವಿನೆನಪಿಗಾಗಿ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಲಾಯಿತು.

ಮೈಸೂರು ಸಂಸ್ಥಾನದ ದಿವಾನ ಹುದ್ದೆಯಿಂದ ನಿವೃತ್ತಿಯಾದ ಅನಂತರವೂ ದೇಶಸೇವೆಯ ಪಥದಲ್ಲಿಯೇ ಸಾಗಿದರು. ತಮ್ಮ ಪರಿಪಕ್ವ ಅನುಭವವನ್ನು ದೇಶದ ಅಭಿವೃದ್ಧಿಗಾಗಿಯೇ ಬಳಸಿಕೊಂಡರು. ಸಾಹಿತ್ಯ ಸೃಷ್ಟಿಯನ್ನು ಮಾಡಿದ್ದಕ್ಕೆ ನಿದರ್ಶನ ಅವರ 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ', 'ಪ್ಲಾನ್ಡ್ಎಕಾನಮಿ ಫಾರ್ ಇಂಡಿಯ' ಹಾಗೂ ಆತ್ಮಚರಿತ್ರೆ 'ಮೆಮೋರೀಸ್' ಆಫ್ ಮೈ ವರ್ಕಿಂಗ್ ಲೈಫ್', 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಕೃತಿಗಳು. ಸೆಪ್ಟೆಂಬರ್ 15, 1960 ರಂದು ಶತಮಾನೋತ್ಸವ ಅಭಿನಂದನೆ 'ಸರ್ ಎಂ. ವಿ.' ಅಭಿನಂದನಾ ಗ್ರಂಥವನ್ನು ಪ್ರಕಟಿಸಲಾಯಿತು. 102 ವರ್ಷಗಳ ತುಂಬುಜೀವನ ಪೂರೈಸಿದ ಸರ್ ಎಂ. ವಿ. ಅವರು 1962 ರಲ್ಲಿ ಇಹಲೋಕ ತ್ಯಜಿಸಿದರು. ಇವರ ಹುಟ್ಟು ಹಬ್ಬದ ನೆನಪಿಗಾಗಿ ಇಂದಿಗೂ 'ಎಂಜಿನಿಯರ್ಸ್ ದಿನಾಚರಣೆಯನ್ನು ಮಾಡಲಾಗುತ್ತದೆ.

**ಪ್ರಶ್ನೆಗಳು:**

**1.** ಕನ್ನಂಬಾಡಿ ಜಲಾಶಯವು_____ ನದಿಗೆ ಸಂಬಂಧಿಸಿದ್ದಾಗಿದೆ.

a. ಶರಾವತಿ

b. ಕಾವೇರಿ

c. ಕೃಷ್ಣಾ

d. ಹೇಮಾವತಿ

**2.** ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ______ ಪದವಿಯನ್ನು ನೀಡಿ ಗೌರವಿಸಿತು.

a. ಪದ್ಮಭೂಷಣ

b. 'ಸರ್'

c. ಭಾರತರತ್ನ

d. ನೊಬೆಲ್

**3.** 'ಆಡು ಮುಟ್ಟದ ಸೊಪ್ಪಿಲ್ಲ' ಎಂಬುದು  ಒಂದು_____

a. ಪಡೆನುಡಿ

b. ನುಡಿಗಟ್ಟು

c. ಗಾದೆಮಾತು

d. ದ್ವಿರುಕ್ತಿ

**4.** ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಇಂದಿಗೂ ____ ದಿನಾಚರಣೆಯನ್ನು ಮಾಡಲಾಗುತ್ತದೆ.

a. ಕಾರ್ಮಿಕ

b. ಮಕ್ಕಳ

c. ಶಿಕ್ಷಕರ

d. ಎಂಜಿನಿಯರ್ಸ್

**5**. ವಿಶ್ವೇಶ್ವರಯ್ಯ ಅವರ ಆತ್ಮಚರಿತ್ರೆ_____

a. 'ಪ್ಲಾನ್ಡ್ಎಕಾನಮಿ ಫಾರ್ ಇಂಡಿಯ'

b. 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ'

c. 'ಮೆಮೋರೀಸ್' ಆಫ್ ಮೈ ವರ್ಕಿಂಗ್ಲೈಫ್',

d. 'ಸರ್ ಎಂ. ವಿ.'

**IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 1X4=4**

1. ವಿವೇಕಾನಂದರನ್ನು ಮಾನವತಾಮಿತ್ರ ಎಂದು ಕರೆದವರು____

a. ಜವಾಹರಲಾಲ್ ನೆಹರು

b. ಕುವೆಂಪು

c. ಗಾಂಧೀಜಿ

d. ದ.ರಾ. ಬೇಂದ್ರೆ

2. 'ವಸಂತ ಮುಖ ತೋರಲಿಲ್ಲ' ಪದ್ಯದಲ್ಲಿ ___ ಉಸಿರಾಡಲಿಲ್ಲ.

a. ಕುಂಬಾರನ ತಿಗುರಿ

b. ಕಮ್ಮಾರನ ಕುಲುಮೆ

c. ಕೇರಿಯ ಮಾರನ ಒಲೆ

d. ನೇಕಾರನ ಮಗ್ಗ

**3.** 'ಮೃಗ ಮತ್ತು ಸುಂದರಿ' ಎಂಬ ಪಾಠವನ್ನು ಬರೆದವರು____

a. ಗಿರೀಶ್ ಕಾರ್ನಾಡ್

b. ಚಂದ್ರಶೇಖರ ಕಂಬಾರ

c. ಪೂರ್ಣಚಂದ್ರ ತೇಜಸ್ವಿ

d. ಪಿ. ಲಂಕೇಶ್

**4.** ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದ ಬಾಲಕ_____

a. ಸುಖ್ ದೇವ್

b. ರಾಜ್ ಗುರು

c. ಭಗತ್ ಸಿಂಗ್

d. ಭಟುಕೇಶ್ವರ ದತ್ತ

**ಭಾಗ - B (40-ಅಂಕಗಳು)**

**SECTION -D**

**(ಬರವಣಿಗೆ ಕೌಶಲ್ಯ) = 12 ಅಂಕಗಳು**

**X.** ನಿಮ್ಮ ಬಡಾವಣೆಯ ಕಸ ವಿಲೇವಾರಿ ಮಾಡುವಂತೆ ಕೋರಿ ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ. **4X1=4**

**ಅಥವಾ**

ದಿನಾಂಕ **10-02-2022** ರ ಕನ್ನಡಪ್ರಭ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ, ಉಪನಿರ್ದೇಶಕರು ಶಿಕ್ಷಣ ಇಲಾಖೆ ಬೆಂಗಳೂರು **-560001** ಇವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ.

**XI** . ಗ್ರಾಮೀಣ ಪ್ರದೇಶಗಳಿಗೆ ಬಸ್ ಸೌಕರ್ಯವಿಲ್ಲದೆ ಸಾರ್ವಜನಿಕರಿಗೆ ಪ್ರಯಾಣಕ್ಕೆ ತೊಂದರೆಯಾಗಿರುವುದರ ಕುರಿತು ಒಂದು ವರದಿ ಸಿದ್ಧಪಡಿಸಿ. **4X1=4**

**XII.** ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **4X1=4**

1. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ

2. ಪ್ರಸ್ತುತ ದಿನಗಳಲ್ಲಿ ನಮ್ಮ ಆರೋಗ್ಯ ರಕ್ಷಣೆ

3. ಮಹಿಳಾ ಸಬಲೀಕರಣ

**(ಪಠ್ಯಗಳ ಅಧ್ಯಯನ) =28 ಅಂಕಗಳು**

**XIII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. 2X4=08**

1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು.?

2. ಲಾವಣಿಗಳನ್ನು ಏಕೆ ವೀರಗೀತೆಗಳು ಎಂದು ಕರೆಯಲಾಗಿದೆ?

3. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?

4. ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**XIV. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ.** **3X2= 06**

1. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

2. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

**XV. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ.** **3X2= 06**

**1.** “ಹುಲಿ ಈಗ ಎಷ್ಟು ಹಸಿದಿರಬೇಕು”

ಅಥವಾ

“ಹುಸಿಯದ ಬೇಹಾರಿಯೇ ಇಲ್ಲ”

**2.** “ಜೀವ ಸತ್ತು ಹೋಗುವುದು ಗೊತ್ತ”

ಅಥವಾ

“ಪ್ರೀತಿಯ ಹಣತೆಯ ಹಚ್ಚೋಣ”

**XVI. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X1=04**

**1.** ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ.

**XVII. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X1=04**

**1.** ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

ಅಥವಾ

ಕರ್ಣನಿಗೆ ಶ್ರೀಕೃಷ್ಣನು ನೀಡಿದ ಆಮಿಷಗಳೇನು? ವಿವರಿಸಿ.

**CENTRAL BOARD OF SECONDARY EDUCATION**

**KEY ANSWERS**

**SUBJECT: KANNADA**

**SUBJECT CODE - 015**

**CLASS - X**

**(2022 - 2023)**

**TIME: 3 HOURS** **MARKS: 80**

## ಮಾದರಿ ಪ್ರಶ್ನೆಪತ್ರಿಕೆಯ ಉತ್ತರಗಳು

---

**ಭಾಗ – A**

**Section - A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು.**

**I (a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X5=5**

**ಪ್ರಶ್ನೆಗಳು:**

1. a. ಬಡೋದಾ ತಾಮ್ರಶಾಸನ

2.c. ಕವಿರಾಜಮಾರ್ಗ

3. a. ಜಿನಸೇನಾಚಾರ್ಯರು

4.a. ಮೇಲಿನ ಹೇಳಿಕೆಯು ಸರಿಯಾಗಿದೆ.

5.b. ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯ

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X5=5**

1.b.ಅಪೌಷ್ಠಿಕತೆ ಮತ್ತು ಅನಾರೋಗ್ಯ

2.a. ಕಚ್ಚಾ

3.b.ದಾದಾಬಾಯಿ ನವರೋಜಿ

4.c. 2005

5.d. ಮೇಲಿನ ಎರಡು ಹೇಳಿಕೆಗಳು ಸರಿ

**II a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

1.a. ಬಚ್ಚಮ್ಮ ಮತ್ತು ಬೀರಪ್ಪನಾಯಕ

2. d.ಕಾಗಿನೆಲೆಯ ಆದಿಕೇಶವರಾಯ

3. d.ಮುಂಡಿಗೆಗಳ ರೂಪದಲ್ಲಿ

4. c. ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ

5.d. ಹರಿ

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X5=5**

1. d.ರಜಪೂತರು

2.a. ಕಿರಾತಾರ್ಜುನೀಯ

3. a.ವಿದ್ಯಾಕೇಂದ್ರಗಳು

4.d.ಭೋಜರಾಜನ ಕಾಲದಲ್ಲಿ

5.c. ಗುಜರಾತಿ, ರಾಜಸ್ತಾನಿ, ಹಿಂದಿ

**(ಅನ್ವಯಿಕ ವ್ಯಾಕರಣ) = 16 ಅಂಕಗಳು.**

**III. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

1. a a-3 b-4 c-2 d-1
2. c. ವ್ಯಾಪಾರಿ
3. b. ಸಪ್ತಮೀ
4. a. ನಿಸ್ಸಂದೇಹ
5. c. ಕ್ರಿಯಾಪದ

**IV. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

1. c. ಮೂಗು
2. a. ಅವನು
3. c.ದೊರೆ
4. c.ಕೆಂದಾವರೆ
5. a.ಅರಣ್ಯ, ಪೀಡಿಸು

**V. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ 1X4=4**

1. a.ಸಂಭಾವನಾರ್ಥಕ
2. c. 'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆಯುತ್ತಾನೆ'
3. d. ಕಾವ್ಯವು ಕವಿಯಿಂದ ಬರೆಯಲ್ಪಟ್ಟಿತು.
4. d.ಆಕಾಶ - ಸೂರ್ಯ
5. b.ಮಾತು ಬಲ್ಲವನಿಗೆ ಜಗಳವಿಲ್ಲ

**VI. ಕೆಳಗಿನ ವ್ಯಾಕರಣಾಂಶಗಳ ಬಹುಆಯ್ಕೆಯ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ 1X4=4**

1. c. ಹೀಗೆ
2. b. ಮಠ
3. b. ಮೆಲ್ಲಮೆಲ್ಲನೆ
4. a. ಅನುಕರಣಾವ್ಯಯ

**(ಬಹು ಆಯ್ಕೆ ಪ್ರಶ್ನೆ- ಪಠ್ಯಗಳ ಅಧ್ಯಯನ) =14 ಅಂಕಗಳು.**

**VII. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ಬರೆದಿರುವ 'ಹಸುರು' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1X5=5**

1. a. ಗಿಳಿ ಹಸಿರು
2. b. ಬನದಂಚಲಿ
3. b. ಮೂಗು
4. c. ಹಸುರ್ ನೆತ್ತರ್ ಒಡಲಿನಲಿ
5. b. ಜಮಖಾನೆ

**VIII. ಈ ಕೆಳಗೆ ಕೊಟ್ಟಿರುವ ಡಿ.ಎನ್. ಜಯಪ್ಪಗೌಡ ಅವರು ರಚಿಸಿರುವ ಭಾಗ್ಯಶಿಲ್ಪಿಗಳು ಎಂಬ ಪಾಠದ ಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1X5 =5**

1. b. ಕಾವೇರಿ
2. b.ಸರ್
3. c. ಗಾದೆಮಾತು
4. d. ಎಂಜಿನಿಯರ್ಸ್
5. c. ಮೆಮೋರೀಸ್' ಆಫ್ ಮೈ ವರ್ಕಿಂಗ್ ಲೈಫ್

**IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**

**1X4=4**

1. b. ಕುವೆಂಪು

2. d. ನೇಕಾರನ ಮಗ್ಗ

3. d. ಪಿ. ಲಂಕೇಶ್

4. c.ಭಗತ್ ಸಿಂಗ್

**ಭಾಗ - B**

**Section - C**

**(ಬರವಣಿಗೆ ಕೌಶಲ್ಯ) = 12 ಅಂಕಗಳು**

**X** ಪತ್ರಲೇಖನ 4

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ಮಾನ್ಯರೇ, ವಿಷಯ- ½
- ಪತ್ರದ ಒಡಲು - 1½
- ತಮ್ಮ ವಿಶ್ವಾಸಿ - ½

ಅಥವಾ

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ವಿಷಯ, ಉಲ್ಲೇಖ- ½
- ಸ್ವ-ವಿವರ - 1½
- ತಮ್ಮ ವಿಶ್ವಾಸಿ - ½

**XI** ವರದಿ 4

- ಶೀರ್ಷಿಕೆ — ½
- ಸ್ಥಳ ½
- ದಿನಾಂಕ - ½
- ವರದಿಯ ಒಡಲು --- 2

- ವರದಿಗಾರರ ರುಜು - -     ½

**XII** ಪ್ರಬಂಧ     4

- ಪೀಠಿಕೆ --     1
- ವಿಷಯ ವಿವರಣೆ -     2
- ಉಪಸಂಹಾರ/ಮುಕ್ತಾಯ -     1

**(ಪಠ್ಯಗಳ ಅಧ್ಯಯನ) =28 ಅಂಕಗಳು**

**XIII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. 2X4=08**

**1**. ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಅದು ಕಾಡು ದಾರಿಯಾಗಿತ್ತು. ಆ ದಿನ ಬೆಳದಿಂಗಳಿನ ರಾತ್ರಿ ಆದರೂ ಶಾನುಭೋಗರ ಮನಸ್ಸಿನಲ್ಲಿ ಭಯ ಆವರಿಸಿದ್ದು ಹೊಟ್ಟೆಯೂ ಹಸಿಯುತ್ತಿತ್ತು. ಸ್ವಲ್ಪ ದೊಡ್ಡ ಹೆಜ್ಜೆ ಹಾಕಿ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಶಾನುಭೋಗರು ಯೋಚಿಸಿದರು.

**2.** ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ವೀರತನ ಸಾಹಸವನ್ನು ವರ್ಣಿಸುವುದರಿಂದ ಲಾವಣಿ ಎಂದರೆ ವೀರ ಗೀತೆ ಎಂದು ಕರೆಯುವುದು ವಾಡಿಕೆ. ಏಕ ಘಟನೆಯನ್ನಾಧರಿಸಿದ್ದು ಕಥನಾತ್ಮಕವಾಗಿರುವ ಲಾವಣಿಗಳು ಹಾಡಿನ ರೂಪದಲ್ಲಿ ಕಟ್ಟಿದ ಕಥೆ ಜನಸಾಮಾನ್ಯರು ರಚಿಸಿರುವ ಲಾವಣಿಗಳು ವಸ್ತುನಿಷ್ಠವಾಗಿರುತ್ತವೆ. ವೀರತನವನ್ನು ವರ್ಣಿಸುವ ಇವುಗಳನ್ನು ವೀರಗೀತೆ ಎಂದು ಕರೆಯುವರು.

**3.** ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ ಹೀಗಿದೆ. ಏಪ್ರಿಲ್ ೧೩-೧೯೧೯ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು ಎರಡು ಸಾವಿರ ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ ಎಂದು ಬರೆಯಲಾಗಿದೆ.

**4** ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಾಡುತ್ತಿವೆ. ಕೋಗಿಲೆಗಳು ಮನತುಂಬಿ ಇಂಪಾಗಿ ಹಾಡುತ್ತಿವೆ. ಹೊಳೆಯುವ ರಂಗೋಲಿಯಲ್ಲಿ ಬಾಲ ರವಿ ತಳತಳಿಸುತ್ತಿದ್ದಾನೆ. ಈ ರೀತಿ ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**XIV. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ. 3X2= 06**

**1**. ಮಹಿಳೆಯ ಅರ್ತನಾದ ಕೇಳಿ ರಾಹಿಲನ ಮನದಲ್ಲಿ ಅನೇಕ ಪ್ರಶ್ನೆಗಳು ಮೂಡಿದವು. ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ. ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವಾಗಬಹುದು? ಎಂಬ ಪ್ರಶ್ನೆಗಳು ರಾಹಿಲನ ಮನದಲ್ಲಿ ಮೂಡಿದವು.

**2.** ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಶತ್ರುಘ್ನನನ್ನು ಯಜ್ಞಾಶ್ವದ ಬೆಂಗಾವಲಿಗೆ ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳ ರಾಜರುಗಳು ತಡೆಯಲು ಹೆದರಿ, ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞದ ಕುದುರೆಯು ಭೂಮಿಯಲ್ಲೆಲ್ಲಾ ಸಂಚರಿಸುತ್ತಾ ವಾಲ್ಮೀಕಿ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳ ಹೊಕ್ಕಿತ್ತು.

**XV.. ಸಂದರ್ಭದೊಡನೆ ವಿವರಿಸಿ. 3X2= 06**

1. ಈ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ

'ವ್ಯಾಘ್ರ ಗೀತೆ ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ

ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ. ಹುಲಿಯಿಂದ ತಪ್ಪಿಸಿಕೊಂಡು ಒಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿ ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯ ಪೂರ್ಣವಾಗಿದೆ.

**ಅಥವಾ**

ಈ ವಾಕ್ಯವನ್ನು ಕವಿ ದುರ್ಗಸಿಂಹನು ರಚಿಸಿರುವ 'ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧರ್ಮಬುದ್ಧಿಯು ಧರ್ಮಾಧಿಕಾರಿಗಳಿಗೆ ಹೇಳುತ್ತಾನೆ.

ನ್ಯಾಯವನ್ನು ತೀರ್ಮಾನಿಸಲು ವೃಕ್ಷದ ಸಾಕ್ಷಿ ಕೇಳಲು ನಿರ್ಧರಿಸಿ ದುಷ್ಟಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿಸಿಟ್ಟು ಧರ್ಮಬುದ್ಧಿಯೇ ಕದ್ದನೆಂದು ತನ್ನ ತಂದೆಯಿಂದ ಹೇಳಿಸುವನು. ಆಗ ಧರ್ಮಬುದ್ಧಿಯು ಮರದ ಬಳಿ ಬಂದು ಮರವನ್ನು ನೋಡಿ, ಸುತ್ತು ಹಾಕಿ ದೊಡ್ಡದಾದ ಪೊಟರೆಯ ಬಳಿ ಮನುಷ್ಯ ಸಂಚಾರವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈ ಮಾತನ್ನು ಹೇಳುತ್ತಾನೆ. ವ್ಯಾಪಾರಿ ವೃತ್ತಿಧರ್ಮದಲ್ಲಿ ಕೆಲವೊಂದು ಸಲ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದು ಇಲ್ಲಿನ ಸ್ವಾರಸ್ಯ.

2. ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿ ಯಿಂದ ಈ ಸಾಲನ್ನು ಆರಿಸಿಕೊಳ್ಳಲಾಗಿದೆ.

ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ, ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ಆಯುಧಗಳನ್ನು ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ವ್ಯಕ್ತವಾಗಿದೆ. ಹಲಗಲಿಯ ಬೇಡರು ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**ಅಥವಾ**

ಈ ಸಾಲನ್ನು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢ ಸಂಕಲ್ಪವನ್ನು ಹೊಂದಿರಬೇಕು ಎಂದು ಕವಿ ಹೇಳುತ್ತಾರೆ. ಜೀವನದಲ್ಲಿ ಎಂತಹ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎನ್ನುವಂತಹ ಸಂದರ್ಭದಲ್ಲಿ ಈ ಮಾತು ವ್ಯಕ್ತವಾಗಿದೆ.

**XVI. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X1=04**

**1.** "ಯುದ್ಧಕ್ಕೆ ಹೋಗಿದ್ದಾನೆ! ನನ್ನ ಮಗನಿನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು. ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ

ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಕೊನೆಯ ಮಾತನ್ನು ಹೇಳುವಾಗ ಮುದುಕಿಯ ಕಂಠ ಗದ್ಗದವಾಗಿ ಮುಂದೆ ಮಾತೇ ಹೊರಡಲಿಲ್ಲ.

ಅಥವಾ

ರಾಮ ಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ ಸಂತಸವನ್ನು ತುಂಬಿಕೊಳ್ಳುತ್ತಾಳೆ. ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡ ತಾನು ಪರಮ ಸುಖಿ ಎಂದು ನರ್ತಿಸುತ್ತಾಳೆ. ರಾಮನೂ ಕೂಡ ನಿನ್ನ ಆದರದಿಂದ ನಾವು ಸುಖಿ ನಿನಗೆ ನಾವು ಋಣಿ ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ. ಹಸಿವು ತೃಷೆ ಹಿಂಗಿದೆ. ನಾನೊಬ್ಬಳು ಬಡವಿ. ನನ್ನ ಮೇಲೆ ಮರುಕ ತೋರದಿರಿ ಎನ್ನುತ್ತಾಳೆ. ಶ್ರೀರಾಮನು ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆ ಇಲ್ಲ. ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚಂದ. ನಿನ್ನ ಮನೆಯೇ ನಮ್ಮ ಮನೆ. ನೀನೇ ತಾಯಿಯಂತೆ ಎನ್ನುತ್ತಾನೆ. ಶಬರಿಯು ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯ ಸಿದ್ಧ ಮಾತಂಗ ಅವರ ಫಲ ನನಗೆ ಫಲಿಸಿತು. ನಿಮ್ಮನ್ನು ಕಂಡು ಪುಣ್ಯವೂ ತುಂಬಿತು. ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ.

**XVII. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 4X1=04**

1. ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ಯುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದಿ ಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, ಬರಡಾಗಿರುವ ಕಾಡು-ಮೇಡುಗಳು ಹಚ್ಚ ಹಸಿರಿನಿಂದ ಕಂಗೊಳಿಸಬೇಕು. ಸಮೃದ್ಧ ವಾಗುವಂತಹ ವಸಂತ ಕಾಲವಾಗುವುದರೊಂದಿಗೆ ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಂಥ ಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತಬೇಕಿದೆ. ಭಾಷೆ ಜಾತಿ ಮತ ಧರ್ಮಗಳ ಭೇದ ಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಯನ್ನು ಕೆಡುಹಬೇಕಾಗಿದೆ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

ಅಥವಾ

ಕೃಷ್ಣನು ಕರ್ಣನಿಗೆ ಹೀಗೆ ಹೇಳುತ್ತಾನೆ. ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನ ಆಣೆ ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ. ಎಂದು ಹೇಳುತ್ತಾ ಕರ್ಣನ ಜನ್ಮ ವೃತ್ತಾಂತವನ್ನು ಹೇಳಿದ. ಕೃಷ್ಣನು ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು ಎನ್ನುತ್ತಾನೆ. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವೂ ಮರುಮಾತನಾಡದೆ ಸೇವೆಯನ್ನು ಮಾಡುವರು. ನೀನು ದುರ್ಯೋಧನನ ಬಾಯಿಯ ಎಂಜಲಿಗೆ ಕೈಯೊಡ್ಡುವುದು ಸರಿಯೇ. ಎಡಭಾಗದಲ್ಲಿ ಕೌರವರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ, ಮಾದವ, ಯಾದವಾದಿಗಳು, ಮಧ್ಯದಲ್ಲಿ ನೀನು ರಾಜ್ಯಸಭೆಯಲ್ಲಿ ಪ್ರಕಾಶಿಸುವ ಸೊಬಗನ್ನು ತೊರೆದು ದುರ್ಯೋಧನನು ಹೇಳಿದ ಮಾತಿಗೆಲ್ಲ ಒಡೆಯ, ಪ್ರಸಾದ, ಅನುಗ್ರಹವಾಗು ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ? ಎಂದು ಆಮಿಷವನ್ನು ಒಡ್ಡಿದನು.

*******************************************************************************